ಅವಳಿಗೆ ಏನೆಂದು ಹೇಳುವುದು..? ಬಸ್ಸಿನಲ್ಲಿ ಯಾರದೋ ಪಕ್ಕ ಕುಳಿತಿದ್ದೆ, ಖುಷಿಯಾಯಿತು ಎಂದು ಹೇಳಿದರೆ ಅವಳು ನಂಬುವಳೇ..? ನಾನು ನಿಜವನ್ನು ತಿಳಿಸಲಿಲ್ಲ. 'ಇವತ್ತು ಊರಿನಿಂದ ಬಂದೆನಲ್ಲಾ ಅದಕ್ಕೇ ಖುಷಿಯಾಗ್ತಾ ಇದೇ ಕಣೇ..' ಎಂದಷ್ಟೇ ಹೇಳಿದೆ. ಆದರೆ ನನ್ನ ಉತ್ತರದಿಂದ ಅವಳು ತೃಪ್ತಳಾದಂತೆ ಕಾಣಿಸಲಿಲ್ಲ. ಎಷ್ಟಾದರೂ ಅವಳು ಮದುವೆಯಾದವಳು. ಒಂದು ಹುಡುಗಿಗೆ ಯಾವಾಗ ತುಂಬಾ ಖುಷಿಯಾಗುತ್ತದೆ ಎಂಬುದನ್ನು ತಿಳಿದವಳು. 'ಅದಲ್ಲಾ ಬಿಡು.. ಏನೋ ಇದೆ.' ಎಂದೇ ಅವಳು ನನ್ನ ಬಗ್ಗೆ ಸಂದೇಹಗೊಂಡಳು. ಸಂಜೆ ಕೆಲಸ ಮುಗಿಸಿಕೊಂಡು ನಾವಿಬ್ಬರೂ ಹೊರಟಾಗ ದಾರಿಯುದ್ದಕ್ಕೂ ಕೆಣಕಿ ಕೆಣಕಿ ಕೇಳಿದಳು. 'ಮನೆಯಲ್ಲಿ ನಿಮ್ಮ ಅಮ್ಮ ಯಾರಾದರೂ ಕೋತಿಯನ್ನು ನಿನಗೆ ಗಂಟು ಹಾಕಲು ಯೋಚಿಸಿದ್ದಾರೇನೇ..?' ಎಂದೂ ತುಸು ವ್ಯಂಗ್ಯ ವಾಗಿಯೇ ಕೇಳಿದಳು. 'ಅಂತಾದ್ದೇನೂ ಇಲ್ಲ ಕಣೇ..' ಎಂದು ನಾನು ಜೋರಾಗಿ ನಕ್ಕೆ. 'ನೀನು ಹೇಳದೇ ಹೋದರೂ ನನಗೆ ಗೊತ್ತಾಗದೆ ಇರ್ತದಾ..' ಎಂದಳು.

ರೂಮಿಗೆ ಬಂದ ಮೇಲೂ ನನ್ನಲ್ಲಿ ಸಂಭ್ರಮದ ಮತ್ತು ಇಳಿದಿರಲಿಲ್ಲ. ಊಟ ಮಾಡಿ ಹಾಸಿಗೆಯಲ್ಲಿ ಮಲಗಿದಾಗಲೂ ಅವರು ಪಕ್ಕದಲ್ಲಿಯೇ ಇರುವಂತೆ ಭಾಸವಾಗುತಿತ್ತು. ನಾನು ನಮ್ಮ ಊರಿನಲ್ಲಿದ್ದಾಗ ನಮ್ಮ ಮನೆಯಲ್ಲಿ ಪತ್ರಿಕೆಗಳನ್ನಾಗಲೀ, ಪುಸ್ತಕಗಳನ್ನಾಗಲೀ ಕೊಂಡುಕೊಳ್ಳುವಷ್ಟು ಆರ್ಥಿಕ ಚೈತನ್ಯ ವಿರಲಿಲ್ಲ. ಅದಕ್ಕಾಗಿಯೇ ನನ್ನ ಅಪ್ಪ ಪೇಟೆಬೀದಿಯಲ್ಲಿ ಅವರ ಅಂಗಡಿಯ ಬಳಿಯಲ್ಲಿ ಇದ್ದ ಸರ್ಕ್ಯುಲೇಟಿಂಗ್ ಲೈಬ್ರರಿಯೊಂದಕ್ಕೆ ನನ್ನನ್ನು ಸದಸ್ಯಳನ್ನಾಗಿ ಮಾಡಿದ್ದರು. ಅಲ್ಲಿಂದ ಕನ್ನಡದ ಕತೆ, ಕಾದಂಬರಿ ಪುಸ್ತಕಗಳನ್ನು ತಂದು ನಾನು ಓದುತ್ತಿದ್ದೆ. ಅವುಗಳಲ್ಲಿ ಕಥಾನಾಯಕಿ ಮತ್ತು ಕಥಾನಾಯಕನ ನಡುವೆ ಅರಳುತ್ತಿದ್ದ ಮೊದಲ ನೋಟದಲ್ಲಿನ ಪ್ರೇಮದ ಲಕ್ಷಣಗಳು ಅಂದು ನನ್ನಲ್ಲಿ ಕಾಣಿಸಿಕೊಂಡಿದ್ದವು. ಹಾಸಿಗೆಯಲ್ಲಿ ಮಲಗಿ ಅತ್ತಿತ್ತ ಹೊರಳಾಡಿ ಏನೇನನ್ನೋ ಕಲ್ಪಿಸಿಕೊಂಡು ಕನಸು ಕಾಣತೊಡಗಿದೆ. ನಾನು ಧರಿಸಿದ್ದ ಒಳ ಉಡುಪುಗಳು ನನಗರಿವಿಲ್ಲದಂತೆಯೇ ಬಿಗಿಯಾಗತೊಡಗಿದ್ದವು. ನನ್ನ ರೂಮಿನಲ್ಲಿ ಸಣ್ಣ ಕಿಟಕಿಯೊಂದಿತ್ತು. ಯಾರಾದರೂ ಇಣುಕಿ ನೋಡಿಯಾರು ಎಂಬ ಭಯದಿಂದ ನಾನು ರಾತ್ರಿಯ ಹೊತ್ತು ಅದನ್ನು ಮುಚ್ಚಿರುತ್ತಿದ್ದೆ. ಗಾಳಿಯಿಲ್ಲದ ಆ ಚಿಕ್ಕ ರೂಮಿನಲ್ಲಿ ವಯೋ ಸಹಜವಾದ ಬಯಕೆಗಳು ಮೂಡಿ ನನ್ನ ಕೈಗಳು ಎಲ್ಲೆಲ್ಲೋ ಸರಿದಾಡಿ ಮೈಯೆಲ್ಲಾ ಬೆವರಿ ಒದ್ದೆಯಾಗಿತ್ತು.

ಮತ್ತೆ ನನಗೆ ಒಂದು ವಾರ ಕಳೆಯುವುದು ಒಂದು ಯುಗ ಕಳೆದಂತೆ ಭಾಸವಾಗತೊಡಗಿತು. ಎಷ್ಟು ಬೇಗ ಊರಿಗೆ ಹೋಗಿ, ಎಷ್ಟು ಬೇಗ ಸೋಮವಾರವಾಗಿ ಬೆಳಿಗ್ಗೆ ಬಸ್ಸು ಹತ್ತಿ ಅವರ ಜೊತೆಯಲ್ಲಿ ಕುಳಿತು ಕೊಳ್ಳುತ್ತೇನೋ ಎಂದು ನನ್ನ ಮನಸ್ಸು ದಿನವೂ ಚಡಪಡಿಸತೊಡಗಿತು. ಆದರೆ ಮುಂದಿನ ವಾರ ನಿಲ್ದಾಣಕ್ಕೆ ಬರುತ್ತಿದ್ದ ಎಲ್ಲಾ ಬಸ್ಸುಗಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿ ಕೊನೆಗೆ ಬಂದ ಮೈಸೂರು–ತಿರುಪತಿ ಬಸ್ಸನ್ನು ಆತಂಕದಿಂದ ಹತ್ತಿದಾಗ ನನಗಾದ ನಿರಾಸೆ ಹೇಳತೀರದು. ಅವರೇನೋ ಅದೇ ಬಸ್ಸಿನಲ್ಲಿ ಕಿಟಕಿಯ ಪಕ್ಕ ಕುಳಿತಿದ್ದರು. ಆದರೆ ಅವರ ಪಕ್ಕದಲ್ಲಿ ಯಾರೋ ಒಬ್ಬರು ಆಗಲೇ ಪವಡಿಸಿದ್ದರು! ಸದ್ಯ ಅವರ ಮುಖವನ್ನಾದರೂ ನೋಡಿದೆನಲ್ಲಾ ಎಂದು ಸಮಾಧಾನ ವಾಯಿತು. ಅವರನ್ನೊಮ್ಮೆ ಮಾತನಾಡಿಸಿ ಹಿಂದಿದ್ದ ಸೀಟಿಗೆ ಬಂದು ಕುಳಿತರೂ ಅವರು ಕುಳಿತಿದ್ದ ಸೀಟಿನತ್ತಲೇ ನೋಡುತಿದ್ದೆ. ಬಸ್ಸು ಇಳಿದ ಮೇಲೆ ಮುಂದಕ್ಕೆ ಅವರು ಕುಳಿತಿದ್ದ ಸೀಟಿನ ಎದಿರು ಓಡಿಹೋಗಿ ನಿಂತು ಕೈಬೀಸಿದೆ.

ಮತ್ತೆ ಕೆಲವೊಂದು ವಾರಗಳು ಅವರ ಪಕ್ಕದ ಸೀಟು ಖಾಲಿಯಿದ್ದು, ಅವರ ಪಕ್ಕದಲ್ಲಿ ಕುಳಿತುಕೊಳ್ಳುವ ಯೋಗ ನನಗೆ ದೊರಕಿತು. ಆಗೆಲ್ಲಾ ನನಗೆ ತುಂಬಾ ಖುಷಿಯಾಗುತಿತ್ತು. ಅವರನ್ನು ಸಾರ್.. ಎಂದು ಕರೆಯಲು ಮನಸ್ಸು ಒಪ್ಪದೆ 'ನೀವು ಹೇಗಿದ್ದೀರಾ..' ಎಂದೇ ಮಾತನಾಡಿಸಲು ಪೀಠಿಕೆ ಹಾಕುತ್ತಿದ್ದೆ. ಹೆಚ್ಚೇನೂ ಮಾತನಾಡದೆ ಅವರ ಪಕ್ಕದಲ್ಲಿ ಕಣ್ಣು ಮುಚ್ಚಿಕೊಂಡು ಕುಳಿತು ಕನಸು ಕಾಣುತ್ತಿದ್ದೆ. ಅವರು ದಾರಿಯುದ್ದಕ್ಕೂ ನನ್ನ ಕೈಯ್ಯನ್ನು ಬಿಗಿಯಾಗಿ ಹಿಡಿದು ಕುಳಿತಿರುವಂತೆ ಭಾಸವಾಗುತಿತ್ತು. ಒಮ್ಮೊಮ್ಮೆ ಕಣ್ಣುಬಿಟ್ಟು ಅವರತ್ತ ನೋಡುತಿದ್ದೆ. ಅವರು ಕಿಟಕಿಯತ್ತ ಮುಖ ಮಾಡಿ ಕುಳಿತಿರುತ್ತಿದ್ದರು. ಅವರ ಎದೆಯ ಮೇಲೆ ಅಂಗಿಯಿಂದ ಇಣುಕಿರುತ್ತಿದ್ದ ಕಪ್ಪುಕೂದಲ ರಾಶಿಯನ್ನೊಮ್ಮೆ ನೋಡಿ ರೋಮಾಂಚನಗೊಂಡು ಮತ್ತೆ ಕಣ್ಣು ಮುಚ್ಚುತ್ತಿದ್ದೆ.

ಹೀಗೆ ನನಗೆ ಅರಿವಿಲ್ಲದಂತೆಯೇ ಯಾವುದೋ ಖುಷಿಯಲ್ಲಿ, ಆತಂಕದಲ್ಲಿ, ನಿರೀಕ್ಷೆಯಲ್ಲಿಯೇ ದಿನಗಳು ಜೂಜು ಕುದುರೆಯಂತೆ ಓಡತೊಡಗಿದವು.

ನನಗೆ ಸೋಮವಾರದ ಬೆಳಿಗ್ಗೆ ಮದ್ದೂರಿನಲ್ಲಿ ಮೈಸೂರು–ತಿರುಪತಿ ಬಸ್ಸು ಹತ್ತುವಾಗಲೇ ಅತೀವ ಆತಂಕವಾಗಿ, ದೇವರೇ ಅವರ ಪಕ್ಕದಲ್ಲಿ ಸೀಟು ಖಾಲಿಯಿರಲಪ್ಪಾ.. ಎಂದು ಬೇಡಿಕೊಂಡೇ ಬಸ್ಸು ಹತ್ತುತಿದ್ದೆ. ಏಕೆಂದರೆ ಅವರೊಂದಿಗೆ ಮಾತನಾಡುವುದಕ್ಕಾಗಿ, ಅವರ ಪಕ್ಕದಲ್ಲಿ ಕುಳಿತುಕೊಳ್ಳು ವುದಕ್ಕಾಗಿ ನಾನು ಒಂದು ವಾರ ಜಾತಕಪಕ್ಷಿಯಂತೆ ಕಾಯುತ್ತಿದ್ದೆ. ಆದರೆ ಪ್ರತಿವಾರವೂ ಅಂತಹ ಅವಕಾಶ ನನಗೆ ದೊರೆಯುತ್ತಿರಲಿಲ್ಲ. ಆಗೆಲ್ಲಾ ನಾನು ಹತಾಶಳಾಗಿ ಅವರ ಪಕ್ಕದಲ್ಲಿ ಕುಳಿತಿದ್ದವರನ್ನು ದೀನಳಾಗಿ ವಿನಂತಿಸಿಕೊಂಡು ಖಾಲಿಯಿದ್ದ ಸೀಟಿಗೆ ಕಳುಹಿಸುತ್ತಿದ್ದೆ. ಇದರಿಂದ ಅವರಿಗೆ ಬೇಸರವಾಗುತಿತ್ತೆಂದು ಅವರ ಮುಖದ ಚಹರೆಯಿಂದಲೇ ತಿಳಿಯುತಿತ್ತು. ಆದರೆ ನಾನು ಅದಕ್ಕೆ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ನನಗೆ ಅವರ ಪಕ್ಕದಲ್ಲಿ ಕುಳಿತಾಗಲೆಲ್ಲಾ ನನ್ನ ಅಪ್ಪನ ಪಕ್ಕ ಕುಳಿತಷ್ಟೇ ಭದ್ರತಾ ಭಾವ ಮೂಡುತಿತ್ತು. ಅವರ ಬಗ್ಗೆ ನನಗೆ ಯಾವುದೋ ಒಂದು ನಂಬಿಕೆ, ಯಾವುದೋ ಒಂದು ವಿಶ್ವಾಸ, ಯಾವುದೋ ಭದ್ರತಾ ಭಾವದ ಜೊತೆಜೊತೆಗೆ ಅಗಾಧವಾದ ಆಕರ್ಷಣೆಯೊಂದು ಅಯಸ್ಕಾಂತದಂತೆ ನನ್ನನ್ನು ಅವರತ್ತ ಸೆಳೆಯುತಿತ್ತು...

ಅವರು ಕೊಟ್ಟಿದ್ದ ವಿಸಿಟಿಂಗ್ ಕಾರ್ಡನ್ನು ಎಲ್ಲಿ ಕಳೆದುಹೋದೀತೋ ಎಂಬ ಭಯದಿಂದ ನನ್ನ ವ್ಯಾನಿಟಿ ಬ್ಯಾಗಿನಲ್ಲಿಯೇ ಜೋಪಾನವಾಗಿ ಇಟ್ಟುಕೊಂಡು ಆಗಾಗ ತೆಗೆದು ಅವರ ಹೆಸರಿನ ಮೇಲೆ ಬೆರಳುಗಳನ್ನು ಆಡಿಸುತ್ತಿದ್ದೆ. ಅದೊಂದು ದಿನ ಬೆಳಿಗ್ಗೆ ಅದರಲ್ಲಿದ್ದ ಅವರ ಮೊಬೈಲ್ ನಂಬರಿಗೆ ಬೆಳಗಿನ ಶುಭ ಹಾರೈಕೆಯ ಸಂದೇಶವನ್ನು ಕಳಹಿಸಿದೆ. ಅವರಿಂದ ಏನೂ ಪ್ರತಿಕ್ರಿಯೆ ಬರಲಿಲ್ಲ. ನಾನು ವಿಚಲಿತಳಾಗದೇ ಪ್ರತಿದಿನವೂ ಬೆಳಗಿನ ಮತ್ತು ರಾತ್ರಿಯ ಶುಭಹಾರೈಕೆಯ ಸಂದೇಶಗಳನ್ನೂ ನನಗಿಷ್ಟವಾದ ಕನ್ನಡದ ಚಲನಚಿತ್ರ ಗೀತೆಗಳ ಸಾಲುಗಳನ್ನೂ ಕಳುಹಿಸತೊಡಗಿದೆ. ನನಗೆ ಅದೊಂದು ಗೀಳಾಗಿ ಹೋಯಿತು. ಅಷ್ಟೆಲ್ಲಾ ಸಂದೇಶಗಳನ್ನು ನಾನು ಕಳುಹಿಸಿದರೂ ಒಂದೇ ಒಂದೂ ಸಂದೇಶವನ್ನು ನನಗೆ ಅವರು ಕಳುಹಿಸುತ್ತಿರಲಿಲ್ಲ. ಅವರು ಮೊದಲೇ ಇಂಜಿನಿಯರ್ರು.. ಕಾರ್ಖಾನೆಯ ಕೆಲಸದಲ್ಲಿಯೇ ಮುಳುಗಿ ಹೋಗಿರುತ್ತಾರೆ.. ಇಂತಹ ಆಟಗಳಿಗೆ ಅವರಿಗೆ ಪುರುಸೊತ್ತು ಎಲ್ಲಿ ಇರುತ್ತದೆ ಎಂದು ಯೋಚಿಸಿಕೊಂಡು ನನಗೆ ನಾನೇ ಸಮಾಧಾನ ತಂದುಕೊಳ್ಳುತ್ತಿದ್ದೆ.

ಮೈಸೂರಿನ ನಜರಾಬಾದಿನಲ್ಲಿ ನಮ್ಮ ದೊಡ್ಡಮ್ಮನ (ನನ್ನ ಅಮ್ಮನ ಅಕ್ಕ) ಮನೆ ಇದೆ. ನಮ್ಮ ದೊಡ್ಡಪ್ಪ ಯಾವುದೋ ಕಾರ್ಖಾನೆಯಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿದ್ದರು. ಅವರಿಗೆ ಒಬ್ಬಳು ಮಗಳು ಮತ್ತು ಒಬ್ಬರು ಮಗ. ಇಬ್ಬರೂ ನನಗಿಂತ ಏಳೆಂಟು ವರ್ಷ ದೊಡ್ಡವರು. ನಾನು ಅವರನ್ನು ಅಕ್ಕ ಮತ್ತು ಅಣ್ಣ ಎಂದೇ ಕರೆಯುತ್ತಿದ್ದೆ. ಚಿಕ್ಕವಳಿದ್ದಾಗ ಮೈಸೂರಿನ ದಸರಾ ನೋಡಲೆಂದು ಅಮ್ಮ ನನ್ನನ್ನು ತಪ್ಪದೇ ಅವರ ಮನೆಗೆ ಕರೆದುಕೊಂಡು ಹೋಗುತ್ತಿದ್ದಳು. ಅವರೂ ಬೇಸಿಗೆ ರಜೆಯಲ್ಲಿ ನಮ್ಮೂರಿಗೆ ಬಂದು ಕೆಲವು ದಿನಗಳು ಇದ್ದು ಹೋಗುತ್ತಿದ್ದರು. ಅಕ್ಕನ ಮದುವೆಯಾಗಿ ಐದಾರು ವರ್ಷವಾಗಿತ್ತು. ಅಣ್ಣನಿಗೆ ಇನ್ನೂ ಮದುವೆಯಾಗಿರಲಿಲ್ಲ. ಹತ್ತನೆಯ ತರಗತಿಯಲ್ಲಿ ಫೇಲಾದ ಮೇಲೆ ಕೆಟ್ಟ ಸಹವಾಸ ಅಂಟಿಸಿಕೊಂಡು ಹಾಳಾಗಿದ್ದ. ಆಮೇಲೆ ನಮ್ಮ ದೊಡ್ಡಪ್ಪ ಬ್ಯಾಂಕಿನಲ್ಲಿ ಸಾಲ ಮಾಡಿ ಅವನಿಗೊಂದು ಆಟೋ ತೆಗೆದುಕೊಟ್ಟಿದ್ದರು. ಮೈಸೂರಿನಲ್ಲಿ ಆಟೋ ಓಡಿಸಿಕೊಂಡು ಹೇಗೋ ಅಪ್ಪ ಅಮ್ಮನಿಗೆ ತೊಂದರೆ ಕೊಡದಂತೆ ಜೀವಿಸುತ್ತಿದ್ದ. ನಾನು ಚಿಕ್ಕವಳಿದ್ದಾಗ ಲಿಂದಲೂ ಅವನಿಗೆ ನನ್ನನ್ನು ಕಂಡರೆ ಒಡಹುಟ್ಟಿದ ತಂಗಿಯಷ್ಟೇ ಪ್ರೀತಿ. ದಸರಾ ನೋಡಲು ನನ್ನನ್ನು ಹೆಗಲ ಮೇಲೆ ಹೊತ್ತುಕೊಂಡು ರಸ್ತೆಯ ಬದಿಯಲ್ಲಿ ನಿಲ್ಲುತ್ತಿದ್ದ. ಮನೆಯಲ್ಲಿ ಎಲ್ಲರೆದುರು ಇವಳು ಒಂಥರಾ ಹಿಂದಿ ಸಿನಿಮಾದಲ್ಲಿ ಹೀರೋಯಿನ್ನು ಇರ್ತಾರಲ್ಲಾ.. ಅಂಗೇ ಇದಾಳೆ ಅಲ್ವಾ.. ಎಂದು ಹೇಳಿ ನನ್ನನ್ನು ಎತ್ತಿಕೊಂಡು ಮುದ್ದಿಸುತಿದ್ದ.

ಅದೊಂದು ದಿನ ಭಾನುವಾರ ನಾನು ಊರಿನಲ್ಲಿದ್ದಾಗ, ಮೂರು ದಿನಗಳ ಹಿಂದೆ ದೊಡ್ಡಮ್ಮ ಅಪ್ಪನನ್ನು ನೋಡಲು ಬಂದವರು ಹೇಮಾಳನ್ನು ನೋಡಿ

**ಪರದೇಶಿ**

ಮಕ್ಕಳಾದರು
ಪರ–ದೇಶಿಗಳು
ಹಾಗೆಯೇ
ತಂದೆ ತಾಯಿಗಳಾದರು
ಪರದೇಶಿಗಳು

★ ಫಾಲನೇತ್ರ, ಗಂಗಪ್ಪ ಸಜ್ಜನ

